(8)

# ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 55 ಐಎನ್‌ಎಂ 90 (ಭಾಗ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ಕಂದಾಯ ಇಲಾಖೆ, ವಿಶೇಷ ಕೋಶ,
ಬೆಂಗಳೂರು, ದಿನಾಂಕ: 25ನೇ ಏಪ್ರಿಲ್ 1991.

## ಸುತ್ತೋಲೆ

ವಿಷಯ: ಮೈಸೂರು (ಧಾರ್ಮಿಕದತ್ತಿ) ಇನಾಂ ರದ್ದಿಯಾತಿ ಕಾಯಿದೆ 1955ರಡಿ ಬರುವ ದೇವಾಲಯ ಜಮೀನನ್ನು ಪರಿವರ್ತಿಸುವ ಹಾಗೂ ಪರಭಾರೆ ಮಾಡುವ ಬಗ್ಗೆ.

ಉಲ್ಲೇಖ: ಪ್ರಕರಣ ಆರ್‌ಡಿ 55 ಐಎನ್‌ಎಂ 90ರಲ್ಲಿ ಕಾನೂನು ಇಲಾಖೆಯ ಅಭಿಪ್ರಾಯ.

---

ಮೈಸೂರು (ಧಾರ್ಮಿಕದತ್ತಿ) ಇನಾಂ ರದ್ದಿಯಾತಿ ಕಾಯಿದೆ 55 ರಂತೆ ಪರಭಾರೆ (ಅಲಿಯನೇಷನ್) ಮಾಡಲು ಅವಶ್ಯ ನಿರ್ಬಂಧವೇನೂ ಇಲ್ಲದಿರುವುದರಿಂದ ಹಾಗೂ ಪ್ರಸ್ತುತ ಕಾಯಿದೆಯಲ್ಲಿ ಪರಭಾರೆಗೆ ಮುನ್ನ ಯಾವ ವಿಧವಾದ ಶುಲ್ಕವನ್ನು ಅಧಿಭೋಗದ ಹಕ್ಕುದಾರರಿಂದ ವಸೂಲು ಮಾಡಲು ಸಹ ಅವಕಾಶವಿಲ್ಲದಿರುವುದರಿಂದ ಹಾಗೂ ಈ ಕಾಯಿದೆಯಡಿ ಬರುವ ಇನಾಂ ಜಮೀನಿನ ಪರಭಾರೆ ಬಗ್ಗೆ ಪೂರ್ವಾನುಮತಿ ಪಡೆಯುವ ಅವಶ್ಯಕತೆಯಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಆದರೆ, ಭೂ ಪರಿವರ್ತನೆ, ವ್ಯವಸಾಯದ ಉದ್ದೇಶದಿಂದ, ವ್ಯವಸಾಯೇತರ ಉದ್ದೇಶಕ್ಕೆ ಮಾಡಲು ಬಯಸಿದಲ್ಲಿ, ಯಥಾಪ್ರಕಾರ, ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 95ರಂತೆ ಇತ್ತೀಚಿನ ತಿದ್ದುಪಡಿ ಸೇರಿದಂತೆ ಸಂಬಂಧಪಟ್ಟವರಿಂದ ಅನುಮತಿ ಪಡೆಯಬೇಕಾಗಿರುತ್ತದೆ. ಈ ಆದೇಶ ಬೇರೆ ಇನಾಂ ಕಾಯಿದೆಗಳಿಗೆ ಅನ್ವಯವಾಗುವುದಾಗಿ ಭಾವಿಸಬಾರದು.

(ಕೆ.ಟಿ.ತಿಮ್ಮಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, ವಿಶೇಷ ಕೋಶ.

1) ಎಲ್ಲಾ ವಿಭಾಗಾಧಿಕಾರಿಗಳಿಗೆ
2) ಎಲ್ಲಾ ಜಿಲ್ಲಾಧಿಕಾರಿಗಳಿಗೆ
3) ಶಾಖಾ ರಕ್ಷಾ ಕಡತ
4) ಕಂದಾಯ ಇಲಾಖೆ (ವಿಶೇಷ ಕೋಶ).

ನಂ. ಎಎಲ್‌ಎನ್-63-91-92
ಸೀತಾ 2591.

ಜಿಲ್ಲಾಧಿಕಾರಿಗಳವರ ಕಾರ್ಯಾಲಯ,
ಹಾಸನ ಜಿಲ್ಲೆ, ಹಾಸನ, ತಾ. 4-6-91

ಪ್ರತಿಯನ್ನು —

63/91-92

ಮಾಹಿತಿಗಾಗಿ ಉಪವಿಭಾಗಾಧಿಕಾರಿಗಳು, ಹಾಸನ :: ಸಕಲೇಶಪುರ ಹಾಗೂ ಜಿಲ್ಲೆಯ ಎಲ್ಲಾ ತಹಸಿಲ್ದಾರರುಗಳಿಗೆ ಕಳುಹಿಸಿದೆ.

ಈ ಕಚೇರಿಯ ಮುಜರಾಯಿ ಶಾಖೆಗೆ ನಕಲು ಕಳಿಸಿದೆ.

ಜಿಲ್ಲಾಧಿಕಾರಿಗಳವರ ಪರವಾಗಿ